MYSORE COURT FEES AND SUITS VALUATION BILL, 1967.

Motion to consider—(contd.)

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮೈಸೂರು ಕೋರ್ಟ್ಸ್ ಮತ್ತು ಸೂಟ್ಸ್ ವ್ಯಾಲ್ಯುಯೇಷನ್ ಮಸೂದೆಯ ವಿಚಾರದಲ್ಲಿ ಸೆಲೆಕ್ಟ್ ಕಮಿಟಿಯವರು ತಮ್ಮ ಶಿಫಾರಸ್ಸನ್ನು ಈ ಸಭೆಗೆ ಕಳುಹಿಸಿದ್ದಾರೆ. ನಾನೂ ಆ ಸಮಿತಿಯಲ್ಲಿದ್ದುದರಿಂದ ಹೆಚ್ಚು ವಿಚಾರಗಳನ್ನು ಪ್ರಸ್ತಾಪಮಾಡದೆ ಕೆಲವಾರು ವಿಚಾರಗಳನ್ನು ತಮ್ಮ ಮುಂದಿಡಲು ಬಯಸುತ್ತೇನೆ. ಈ ಮಸೂದೆಯ ಬಗ್ಗೆ ಆಲೋಚನೆ ಮಾಡುವಾಗ ಪ ಮುಖ್ಯವಾಗಿ ಒಂದು ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಅದೇನೆಂದರೆ, ನಾನಾಗಲೇ ಹೇಳಿದ ಹಾಗೆ ಕೋರ್ಟ್ ಫೀಸ್ ಎಂಬುದು ತೆರಿಗೆಯಲ್ಲ. ಎಂದರೆ, ದೇಶಕ್ಕೆ ಉತ್ಪತ್ತಿ, ಬರಬೇಕೆಂಬ ಉದ್ದೇಶದಿಂದ ಯಾವುದಾದರೂ ತೆರಿಗೆಯನ್ನು ಹಾಕುವ ವಿಧಾನದಲ್ಲ, ಇದರಿಂದ ವರಮಾನವನ್ನು ನಿರೀಕ್ಷಿಸಬಾರದು. ಇದಕ್ಕೆ ಬದಲು, ಸರ್ಕಾರದವರು ಪ್ರಜೆಗಳಿಗೆ ನ್ಯಾಯವನ್ನೊದಗಿಸುವುದಕ್ಕೆ ಮಾಡತಕ್ಕ ವ್ಯವಸ್ಥೆಗೆ ಒಂದೊಂದು ನಂದರ್ಭಕ್ಕೆ ತಕ್ಕಂತೆ ಆಯಾ ದಾವೆ ಅಥವಾ ಕೇಸ್‌ಗೆ ತಕ್ಕಂತೆ ಬೆಲೆಯನ್ನು ಕಟ್ಟುವುದು ಎಂದು ಭಾವಿಸಬೇಕು. ಇದೇ ಕೋರ್ಟ್ ಫೀ. ಈ ದೃಷ್ಟಿಯಿಂದ ನಾವು 1937ನೆಯ ಇಸವಿಯಿಂದ ಈವರೆಗೆ ನಡೆದು ಕೊಂಡು ಬಂದಿರತಕ್ಕ ನಮ್ಮ ಮೈಸೂರು ಸಂಸ್ಥಾನದ ವಿಧಾನವನ್ನು ನೋಡಿದರೆ ಈ ರೀತಿ ನ್ಯಾಯವನ್ನು ಜನರಿಗೊದಗಿಸತಕ್ಕ ಒಂದು ಹವ್ಯಾಸದಲ್ಲಿ ಸಂಸ್ಥಾನಕ್ಕೆ ಉತ್ಪತ್ತಿ ಬರಬೇಕೆಂಬ ಅಭಿಪ್ರಾಯವನ್ನು ಎಂದೂ ಇಟ್ಟುಕೊಂಡಿದ್ದಿಲ್ಲ.

[SRI J. H. SHAMSUDDIN in the Chair.]

ಅದರ ಬಡವರು ವ್ಯವಸ್ಥೆ ಮಾಡುವುದಕ್ಕೆ ಖರ್ಚು ಎಷ್ಟು ಬರುತ್ತದೆ; ಹಾಗೂ ಅದಕ್ಕೋಸ್ಕರ ಬರಬೇಕಾದ ಉತ್ಪತ್ತಿ ಎಷ್ಟು ಎಂಬುದನ್ನು ಆಲೋಚನೆ ಮಾಡಬೇಕು. ಈವರೆಗೆ ಪ್ರಜೆಗಳಿಗೆ ನ್ಯಾಯವನ್ನು ದೊರಕಿಸಿಕೊಡುವದಕ್ಕಾಗಿ ಕಡಮೆ ಖರ್ಚಿನಿಂದ ಅಥವಾ ಮುಫತ್ತಾಗಿ ನ್ಯಾಯ ದೊರಕಿಸಿ ಕೊಡತಕ್ಕಂಥ ಒಂದು ವಿಧಾನವನ್ನು ಅನುಸರಿಸಿಕೊಂಡು ಬಂದಿರತಕ್ಕೆ ರೂಢಿಯಾಗಿದೆ. 1955-56ನೆಯ ವರ್ಷದ ಬಡ್ಜೆಟ್ ನೋಡಿದರೂ ಸಹಿತ ಮೈಸೂರು ಸಂಸ್ಥಾನದಲ್ಲಿ ವರಮಾನಕ್ಕಿಂತ ಖರ್ಚು ಹೆಚ್ಚಾಗಿರಲಿಲ್ಲ. ಎಂದರೆ ಖರ್ಚು ಕಡಮೆಯಾಗಿತ್ತು. ಅಲ್ಪಸ್ವಲ್ಪ ಕಡಮೆ ಇದ್ದರೂ ಸಹ ಹೆಚ್ಚು ಮಾಡಲು ಹೋಗಲಿಲ್ಲ. ಪ್ರಜೆಗಳಿಗೆ ನ್ಯಾಯವನ್ನು ಒದಗಿಸಿ ಕೊಡುವ ವ್ಯವಸ್ಥೆಯ ವಿಧಾನವನ್ನು ನೋಡಿದರೆ ಸಾಧ್ಯವಾದಮಟ್ಟಿಗೆ ಕಡಮೆ ಖರ್ಚಿನಲ್ಲಿ ನ್ಯಾಯವನ್ನು ಒದಗಿಸಬೇಕು; ಇದರಿಂದ ಲಾಭ ನಿರೀಕ್ಷಣೆ ಮಾಡಕೂಡದು ಎಂಬ ವಿಚಾರ ವಿದ್ದುದು ಗೋಚರವಾಗುತ್ತದೆ. 1955-56 ರಲ್ಲಿ ಸುಮಾರು ಎರಡುಲಕ್ಷ ರೂಪಾಯಿ ಕಡಮೆ ವರಮಾನ ಬಂದಿದೆ. ಖರ್ಚು 29,39,000 ರೂಪಾಯಿ ಇದ್ದರೆ ವರಮಾನ 27,12,000 ರೂಪಾಯಿ ಇದೆ. ಒಂದು ದಾವೆ ಅಥವಾ ಒಂದು ಅರ್ಜಿಯನ್ನು ಕೋರ್ಟಿಗೆ ಕೊಡುವ ಸಂದರ್ಭದಲ್ಲಿ ಅದರ ಖರ್ಚು ಮತ್ತು ವರಮಾನ ಏನು ಎಂಬುದನ್ನು ಆಲೋಚನೆ ಮಾಡದೆ ನಮ್ಮ ಮೈಸೂರು ಸಂಸ್ಥಾನಕ್ಕೆ ಯಾವುದೇ ರೀತಿಯಿಂದ ಉತ್ಪತ್ತಿ ಬರಬೇಕು ಎಂಬ ದೃಷ್ಟಿಯಿಂದ ಈ ಏರ್ಪಾಡನ್ನು ಮಾಡಿದಂತಿದೆ. ಇದಕ್ಕಾಗಿ ನನಗೆ ಆಶ್ಚರ್ಯವಾಗುತ್ತಿದೆ. ಯಥಾಪ್ರಕಾರವಾಗಿ ದೇಶದ ಜನತೆಯ ಮೇಲೆ ತೆರಿಗೆಯ ಭಾರ ಹೆಚ್ಚಾಗುತ್ತಿದೆ. ಇನ್ನೂ ಹೆಚ್ಚಿಗೆ ತೆರಿಗೆ ಹಾಕುತ್ತಿದ್ದೀರಿ. ಸ್ಟಾಂಪ್ ಬೆಲೆ ಹೆಚ್ಚಿಗೆ ಹಾಕುವ ರೀತಿಯನ್ನು ಇಟ್ಟುಕೊಂಡಿದ್ದೀರಿ. ಕೋರ್ಟಿನವರು ಜನಗಳಿಗೆ ನ್ಯಾಯವನ್ನು ಕೊಡತಕ್ಕ ಸೇವೆಗೆ ಪ್ರತಿಫಲ ಎಂದರೆ, ಕಷ್ಟಕ್ಕೆ ತೆಗೆದುಕೊಳ್ಳುವುದು ಫೀಜ್ ಆಗಿದೆ. ಈಗ ಪ್ರತಿಫಲ ಶಬ್ದಕ್ಕೆ ಬದಲಾಗಿ ಲೆವಿ (levy) ಎಂಬ ಪದವನ್ನು ಉಪಯೋಗಿಸಿದ್ದೀರಿ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್ ನೋಡಿದರೆ ಟ್ಯಾಕ್ಸ್ ಹಾಕುವುದಕ್ಕೆ ಹಿಂಜರಿಯುವುದಿಲ್ಲವೆಂದು ಕಾಣಿಸುತ್ತದೆ. ಈಗ ಈ ವಿಚಾರವಾಗಿ ನಾನು ಹೆಚ್ಚಿಗೆ ಹೇಳದೆ ಇನ್ನು ಕೆಲವು ಕಲಮುಗಳ ವಿಚಾರವಾಗಿ ಹೇಳುತ್ತೇನೆ.

ಈ ಮಸೂದೆಯ ಕೊನೆಗಿರುವ ಷೆಡ್ಯೂಲ್ ನೋಡುವುದಾದರೆ ಮೊದಲು 10 ರೂಪಾಯಿಗೆ ನಾವು ರೂ. 1—1—0 ಫೀಜ್ ಕೊಡುತ್ತಿದ್ದೆವು. ಈಗ 12 ಆಣೆ ಕೊಡಬೇಕಾಗುತ್ತದೆ. ಅದೇ ರೀತಿಯಾಗಿ ಒಂದು ನೂರು ರೂಪಾಯಿಗಳಿಗೆ ಹಿಂದಕ್ಕೆ ರೂ. 12—5—0 ಕೋರ್ಟ್ ಫೀಜ್ ಸ್ಟಾಂಪ್ಸ್ ಕೊಡುತ್ತಿದ್ದೆವು. ಈಗ ಅದು ರೂ. 7—8—0 ಇದೆ. ಇಲ್ಲಿ ಕಡಮೆ ಮಾಡಲಾಗಿದೆ ಎಂದು ಹೇಳಬಹುದು. ಆದರೆ ಮುಂದಕ್ಕೆ ಹೋಗಿನೋಡಿದರೆ ಹತ್ತುಸಾವಿರ ರೂಪಾಯಿಗಳಿಗೆ ಹಿಂದಕ್ಕೆ 712 ರೂಪಾಯಿ ಇದ್ದುದನ್ನು ಈಗ 750 ರೂಪಾಯಿ ಮಾಡಲಾಗಿದೆ. ಅಂದರೆ ಹೆಚ್ಚಾಗಿದೆ. ಇದೇ ರೀತಿಯಾಗಿ ಮೊಬಲಗು ಹೆಚ್ಚಾದ ಹಾಗೆ ಕೋರ್ಟ್ ಫೀಜ್ ಸ್ಟಾಂಪು ಹೆಚ್ಚಾಗುತ್ತ ಹೋಗಿದೆ. ಇದರ ಅರ್ಥವೇನು? ದಾವೆಯ ಮೊಬಲಗು ಹೆಚ್ಚಾದಂತೆ ದುಡ್ಡು ಹೆಚ್ಚಿಗೆ ಕೊಡಲಿ ಎನ್ನತಕ್ಕಂಥ ಭಾವನೆ ಇದೆ ಎಂದು ಕಾಣುತ್ತದೆ. ಇದು ವರಮಾನಕ್ಕೆ ಇರತಕ್ಕ ಟಾಕ್ಸ್ ಅಲ್ಲ. ಸ್ಟಾಂಪ್ ಫೀಜ್ ಕೊಡುವದೆಂದರೆ ನ್ಯಾಯವನ್ನು ದೊರಕಿಸಿ ಕೊಡುವುದಕ್ಕೆ ಕೋರ್ಟಿನವರು ಪಡತಕ್ಕ ಕಷ್ಟಕ್ಕೆ ಪ್ರತಿಫಲ ನಿಗದಿ ಮಾಡಬೇಕಾಗಿದೆ. ಇದನ್ನು ಸೂಕ್ಷ್ಮವಾದ ದೃಷ್ಟಿಯಿಂದ ತಿಳಿದುಕೊಳ್ಳಬೇಕು. ವರಮಾನ ಹೆಚ್ಚಿಗೆ ಇದ್ದರೆ ಫೀಜ್ ಕೊಡಲಿ ಎಂಬುದು ಅಲ್ಲ. ಒಂದು ವೇಳೆ ಹಾಗೆ ಮಾಡಿದರೆ ಇದು ಅರ್ಥವಿಲ್ಲದ ಮಾತಾಗುತ್ತದೆ. ನಮ್ಮ ಸಂಸ್ಥಾನವಿರಲಿ, ಬೇರೆ ಯಾವ ಸಂಸ್ಥಾನವೇ ಇರಲಿ ಅಥವಾ ಸುಪ್ರೀಮ್ ಕೋರ್ಟು ಇರಲಿ, ಕೋರ್ಟ್ ಫೀಜ್ ಬೆಲೆ ಕೊಟ್ಟಿರತಕ್ಕಂಥ ಪುನ್ತಕವನ್ನು ನೋಡಿದರೆ ಅವುಗಳಿಗಿಂತ ಇದು ಹೆಚ್ಚಾಗಿರುವುದು ಕಂಡುಬರುತ್ತದೆ. ಆದುದರಿಂದ ದುಡ್ಡು ಹೆಚ್ಚಾದಂತೆ ಕೋರ್ಟ್ ದಾಮಾಷವನ್ನು ಹೆಚ್ಚಿಸುವ ನೀತಿಯನ್ನು ಇಟ್ಟುಕೊಂಡಿರುವುದರ ಅರ್ಥವಾಗುವದಿಲ್ಲ. ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತದೆ, ತೊಂದರೆಯಾಗುತ್ತದೆ. ನಾಹಕಾರನ ವಿರುದ್ಧ ಅಕಸ್ಮಾತ್ ಅಪೀಲ್ ಮಾಡುವುದಿದ್ದರೆ, ಖರ್ಚು ಹೆಚ್ಚು ಮಾಡಿರುವುದರಿಂದ ಅಪೆಲೆಟ್ ಕೋರ್ಟಿಗೆ ಹೋಗಲು ಬಡವನಿಗೆ ಮಾರ್ಗವಿಲ್ಲದಂತಾಗಿ ಅನ್ಯಾಯವಾಗುತ್ತದೆ. ದಾವೆಯಲ್ಲಿ ಎಲ್ಲಾ ಖರ್ಚುಮಾಡಿ ಅಪೀಲು ಮಾಡುವುದಕ್ಕೆ ಒಂದು ಕಾಸೂ ಇಲ್ಲದ ಪರಿಸ್ಥಿತಿ ಬಡವನಿಗೆ ಬರಬಹುದು. ಆದಕಾರಣ ಕೋರ್ಟಿನವರು ನ್ಯಾಯದೊರಕಿಸಿಕೊಡಲು ವಹಿಸಬೇಕಾದ ಕಷ್ಟ,

* Asterisk indicates that the remarks or speeches have not been revised by the member concerned.

ತೊಂದರೆ ಅಥವಾ ಶ್ರಮಕ್ಕೆ ಅನುಗುಣವಾಗಿ ಯಾವ ಯಾವುದಕ್ಕೆ ಎಷ್ಟೆಷ್ಟು ಫೀಜು ತೆಗೆದುಕೊಳ್ಳಬೇಕು ಎಂಬುದಕ್ಕೆ ಒಂದು ವಿಧಾನವನ್ನು ಅನುಸರಿಸಿಕೊಂಡು ಬರುವದಕ್ಕೆ ಆಲೋಚನೆಮಾಡಿ ನಿರ್ಧರಿಸಬೇಕು. ಈ ವಿಚಾರದಲ್ಲಿ ಈಗಿರತಕ್ಕ ಪ್ರಮಾಣದಲ್ಲಿ ಹೆಚ್ಚಿಗೆ ದುಡ್ಡನ್ನು ನಿಗದಿ ಮಾಡಿದ್ದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲು ಹಿಂದಿನ ಕೋರ್ಟ್ ಫೀಸ್ ಆಕ್ಟಿನಲ್ಲಿ ಇರುವುದನ್ನೇ ಒಪ್ಪಿಕೊಂಡರೆ ಅಷ್ಟು ತೊಂದರೆಯಾಗುವುದಿಲ್ಲ. ಇದರಲ್ಲಿ ಹತ್ತು ರೂಪಾಯಿಗಳಿಂದ 1,000 ರೂಪಾಯಿಗಳವರೆಗೆ 10 ರೂಪಾಯಿಗೆ 75 ನಯೇ ಪೈಸೆ ಎಂದು ಮಾಡಿದ್ದೀವೆ. ಇದನ್ನಾದರೂ ಒಪ್ಪಿಕೊಳ್ಳಿ. ಅದಿಲ್ಲದೆ ಹೋದರೆ ಹಿಂದಿನದನ್ನಾದರೂ ಒಪ್ಪಿಕೊಳ್ಳಿ ಎಂದು ನಾನು ಸೂಚಿಸಬಯಸುತ್ತೇನೆ.

ಆಮೇಲೆ, ಎರಡನೆಯ ಷೆಡ್ಯೂಲಿನಲ್ಲಿ ಅರ್ಜಿಗಳಿಗೆ ಯಾವ ರೀತಿ ಸ್ಟ್ಯಾಂಪು ಕಟ್ಟಬೇಕೆಂಬುದಿದೆಯೆಂದು ಹೇಳಿದ್ದೀರಿ. ಒಂದೊಂದನ್ನೂ ನೋಡುತ್ತಾ ಹೋದರೆ ಅದರ ಕಷ್ಟವೇನೆಂಬುದು ಅರಿವಾಗುತ್ತದೆ. ಅದರಲ್ಲೂ fixed court fees ಎಂದು ಮಾಡಿರುವುದಂತೂ ತುಂಬಾ ಅನ್ಯಾಯ. ಹಿಂದಿನ ವರಮಾನಕ್ಕೂ ಈಗ ಇದರಿಂದ ಬರಬಹುದಾದ ವರಮಾನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದನ್ನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಈ ವಿಚಾರದಲ್ಲೂ ಹಿಂದಿನ ಕೋರ್ಟ್ ಫೀಸ್ ಸ್ಟ್ಯಾಂಪಿನ ಆಕ್ಟ್‌ನ್ನೇ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರುಗಳು ಇದನ್ನು ಒಪ್ಪಿ ಅದರಂತೆ ಶಾಸನಮಾಡುವುದಕ್ಕೆ ಪ್ರಯತ್ನಿಸಬೇಕೆಂದು ಹೇಳುತ್ತೇನೆ.

ಸೂಟ್ ವ್ಯಾಲ್ಯುಯೇಷನ್ ವಿಧಾನದಲ್ಲಿಯೂ ಸಹ ಬಹಳವಾಗಿ ತೊಡಕನ್ನು ತಂದಿಟ್ಟಿದ್ದೀರಿ. ಹಿಂದೆ ಯಾವುದಾದರೂ ಒಂದು ದಾವೆಯಲ್ಲಿ ಹಕ್ಕುಬಾಧ್ಯತೆಗಳನ್ನು ನಿರ್ಧರಿಸುವುದರ ಮೂಲಕ ಉದ್ಭವಿಸಬಹುದಾದ Consequential Relief (ಪರಿಹಾರಗಳಿಗೆ) ಯಾವ ರೀತಿ ಸ್ಟ್ಯಾಂಪ್ ಕೊಡಬೇಕೆಂದು ಹಿಂದಿನ ಆಕ್ಟಿನ ಐದನೆಯ ಸೆಕ್ಷನ್ನಿನ ಐದು ಮತ್ತು ಮುಂದಿನ ಕಲಮುಗಳಲ್ಲಿ ಇದ್ದುದನ್ನು ಬೇರೆಬೇರೆಯಾಗಿ ಒಡೆದುಹಾಕಿ ನಾನಾ ರೀತಿಯಲ್ಲಿ ಹೆಚ್ಚಿಗೆಮಾಡಿದ್ದೀರಿ. ಒಂದು ನಿದರ್ಶನವನ್ನು ಹೇಳುವುದಾದರೆ, ದಾವೆಯ ವಿಚಾರದಲ್ಲಿ, ಒಂದು ಜುಮ್ಮಾನಿನ ದಾವೆ ತೆಗೆದುಕೊಂಡುಬಂದರೆ, ಅವನು ಅದಕ್ಕೆ ಸಂಬಂಧಪಟ್ಟ ಹಕ್ಕುಬಾಧ್ಯತೆಗಳನ್ನು ಎದುರಿನಬೇಕಲ್ಲದೆ, ಆ ಹಕ್ಕುಬಾಧ್ಯತೆಗಳ ಜೊತೆಗೆ ಉಂಟಾಗತಕ್ಕ ಪರಿಣಾಮಗಳ ಪರಿಹಾರವನ್ನೂ ಸಹ (Consequential Reliefಗಳನ್ನೂ ಸಹ) ಕೊಡಬೇಕೆಂದಿದೆ, ಹಿಂದೆ assessmentನ್ನು 30 ವರ್ಷಕ್ಕೆ ಒಂದು ಸಾರಿ ಬದಲಾವಣೆಮಾಡಬೇಕೆಂದು ಸರ್ವೇ ಮ್ಯಾನ್ಯುಯಲ್‌ನಲ್ಲಿ ಉಲ್ಲೇಖಿತವಾಗಿದ್ದು ಕೋರ್ಟು ಫೀನು assessmentನ ಹತ್ತರಷ್ಟು ಮಾತ್ರ ಕೊಡಬೇಕೆಂದಿದ್ದುದನ್ನು ತಪ್ಪಿಸಿ, ಉದ್ದೇಶಪೂರ್ವಕವಾಗಿ 20 ವರ್ಷಕ್ಕೆಂದು ಆ ಕಾಲವನ್ನು ಇಳಿಸಿ ಫೀನನ್ನು 12½ಯಷ್ಟಿರಬೇಕೆಂದುಮಾಡಿದ್ದೀರಿ. ಹೀಗೆ ಒಂದೊಂದನ್ನೂ ಜಾಸ್ತಿಮಾಡುತ್ತಾ ಹೋದರೆ ಎಲ್ಲಿಗೆ ಪರ್ಯವಸಾನವಾಗುತ್ತದೋ ಗೊತ್ತಿಲ್ಲ. ಕೋರ್ಟಿಗೆ ಹೋಗಿ ಯಾರಾದರೂ ಪರಿಹಾರವನ್ನು ಪಡೆಯಬೇಕೆಂದು ಇಷ್ಟಪಟ್ಟರೆ ಅವನಿಗೆ ಇದರಿಂದಾಗಿ ಬಹಳ ಕಷ್ಟವಾಗುತ್ತದೆ. ನ್ಯಾಯವನ್ನು ಪಡೆತ್ತು ನ್ಯಾಯಾಲಯಗಳಲ್ಲಿ ನಡೆಯತಕ್ಕ ಸಂಪ್ರದಾಯಗಳನ್ನು ಈಗ ತಲೆಕೆಳಗೆ ಮಾಡುತ್ತಿದ್ದೀರಿ. ನ್ಯಾಯಾಲಯಗಳಲ್ಲಿ ಫೀಸ್‌ಎಂದು ವಿಧಿಸುತ್ತಿದ್ದುದನ್ನು ಬದಲಾಯಿಸಿ Levy ಎಂದು ವಿಧಿಸುತ್ತಿದ್ದೀರಿ. Levy ಎನ್ನುವುದರ ಅರ್ಥಕ್ಕೂ fees ಎಂಬುದರ ಅರ್ಥಕ್ಕೂ ಬಹಳ ದೂರವಿದೆ. ನನ್ನ dissenting noteನಲ್ಲಿಯೂ ಈ ಪದಗಳ ಅರ್ಥ ವಿವರಣೆಯನ್ನು ಉಲ್ಲೇಖಿಸಿದ್ದೇನೆ. ಇನ್ನು ಮುಂದೆ ಕೋರ್ಟ್ ವ್ಯವಹಾರಗಳ ವಿಚಾರದಲ್ಲಿ ಬಡವರಿಗೆ ಮತ್ತು ಕಷ್ಟದಲ್ಲಿರುವವರಿಗೆ ಬಹಳ ಕಠಿಣವಾಗುತ್ತದೆ. ಅವರು ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳುವುದು ಕೇವಲ ದುರ್ಲಭವಾಗುತ್ತದೆಂಬುದರಲ್ಲಿ ಅನುಮಾನವೇಇಲ್ಲ. ನನ್ನ ಸ್ವಂತ ವಿಚಾರವನ್ನೇ ನಿದರ್ಶನವಾಗಿ ಹೇಳುವುದಾದರೆ, ಒಂದು ದಾವಾ 15,000 ರೂಪಾಯಿಗಳಿಗೆ ಪ್ರತಿವಾದಿಯ ಮೇಲೆ ಡಿಕ್ರಿ ಆಯಿತು. ಆ ಡಿಕ್ರಿಯಲ್ಲಿ ತತ್ವಶಃ ಒಂದು ಅನ್ಯಾಯವಾಗಿತ್ತು. ಆದರೂ ಅದರ ಮೇಲೆ ರಿವ್ಯೂ ಪಿಟಿಷನ್ ಹಾಕಬೇಕಾದರೆ ಹೆಚ್ಚಿನ ಖರ್ಚಾಗುತ್ತಿತ್ತು. ಅಷ್ಟೊಂದು ಖರ್ಚನ್ನು ಹೊರುವುದಕ್ಕೆ ಸಾಧ್ಯವಿಲ್ಲದೆ ಹೋಗಿ ರಿವ್ಯೂ ಪಿಟಿಷನ್ ಹಾಕಲಾಗಲಿಲ್ಲ. ಹೀಗಾಗಿ ಡಿಕ್ರಿ ಕೊನೆಗೆ ಖಾಯಂ ಆಯಿತು. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ಹೆಚ್ಚಿಗೆ ದುಡ್ಡು ವಿಧಿಸಿದರೂ ಸಾಹುಕಾರರಿಗೆ ಮಾತ್ರ ಆದು ಅನ್ವಯವಾಗುತ್ತದೆಂದು ಭಾವಿಸುವುದು ತಪ್ಪು. ಆದ್ದರಿಂದ ನ್ಯಾಯಾಲಯಗಳಿಗೆ ಟ್ಯಾಕ್ಸ್‌ನ್ನು ಕೊಡಬೇಕೆಂಬ ಮನೋಭಾವವನ್ನು ಬಿಟ್ಟು ನ್ಯಾಯಾಲಯಗಳು ಪಡತಕ್ಕ ಕಷ್ಟಕ್ಕೆ, ಅವರು ವಹಿಸುವ ಶ್ರಮಕ್ಕೆ ತಕ್ಕ ಫೀಸನ್ನು ಮಾತ್ರ ವಿಧಿಸುವುದು ನ್ಯಾಯವಾಗಿದೆ. ಈ ಬಿಲ್ಲಿನಲ್ಲಿ ಈ ದೃಷ್ಟಿ ಮಾಯವಾಗಿರುವುದನ್ನು ಕಂಡು ನನಗೆ ಸಂಕಟವಾಗುತ್ತದೆ. ಆದ್ದರಿಂದ ಹಿಂದಿನ ಕಾನೂನಿನಲ್ಲಿ ಎಷ್ಟಿತ್ತೊ ಅಷ್ಟನ್ನೇ ಒಪ್ಪಿಕೊಳ್ಳುವುದು ಸೂಕ್ತ. ಅದಕ್ಕಿಂತ ಹೆಚ್ಚಿಗೆ ಹಾಕುವುದಕ್ಕೆ ಕಾರಣವಿಲ್ಲ. ಮತ್ತು ಕಾನೂನುಗಳನ್ನೂ ಈ ರೀತಿ ಪದೇಪದೇ ಬದಲಾವಣೆಮಾಡುವುದೂ ತಪ್ಪು.

ಹೊಸದಾಗಿ ನಾನಾ ಭಾಗಗಳು ಮೈಸೂರಿಗೆ ಬಂದ ಮೇಲೆ ಅಲ್ಲಲ್ಲಿದ್ದ ಕಾನೂನುಗಳನ್ನೆಲ್ಲಾ ಸಮನ್ಯಾಯಪಾಡಿ ಬಂದೇ ರೀತಿಯಲ್ಲಿರುವಂತೆ ಮಾಡುವಾಗ ನನಗೊಂದು ಸಂಕಟದ ವಿಚಾರ ಎದ್ದುಕಾಣುತ್ತದೆ. ಎಲ್ಲಾ ಕಡೆಯಲ್ಲೂ ಇರುವ ದರಗಳನ್ನು ನೋಡಿ, ಎಲ್ಲಿ ಹೆಚ್ಚಿಗೆ ದರವಿದೆಯೋ ಅದನ್ನೇ ಸಾರ್ವತ್ರಿಕವಾಗಿ apply ಮಾಡಬೇಕೆಂಬುದರಲ್ಲಿ ಏನು ನ್ಯಾಯ ವಿದೆಯೋ ಗೊತ್ತಿಲ್ಲ. ಮದರಾಸ್ ಭಾಗದಲ್ಲಿ ಜಾಸ್ತಿಯಿದ್ದರೆ ಅದನ್ನು quoteಮಾಡಿ ಮಿಕ್ಕ ಭಾಗಗಳೆಲ್ಲಾ ಅನ್ವಯಿಸಬೇಕೆಂದು ಹೇಳುವುದು, ಬೊಂಬಾಯಿಯಲ್ಲಿ ಒಂದು ಟ್ಯಾಕ್ಸ್ ಜಾಸ್ತಿಯಿದ್ದರೆ ಅದನ್ನು quote ಮಾಡಿ ಅದೇ ಮಿಕ್ಕೆಲ್ಲ ಕಡೆಗೂ ಇರುವುದು ಸರಿಯೆನ್ನುವುದು ಹೇಗೆ ಧರ್ಮವೋ ನ್ಯಾಯವೋ ಗೊತ್ತಿಲ್ಲ. ಆದ್ದರಿಂದ ಈಗಲೂ ಈ ರೀತಿ ಒಂದು levy ಅಥವಾ taxನ್ನು ಹಾಕುವ ಧರ್ಮವನ್ನು ಬಿಟ್ಟು ಫೀಸ್ ಎಂದು ಏನಾದರೂ ಇಟ್ಟರೆ ಇದ ಬಹುದು. ಅದೂ ಯಾವ ರೀತಿ ಇರಬೇಕೆಂದರೆ ಖರ್ಚು ಎಷ್ಟಾಗುತ್ತದೆಯೋ ಅದಕ್ಕೆ ತಕ್ಕಷ್ಟು ಮಾತ್ರ ಇರಬೇಕು. ಹಿಂದಿನ ಖರ್ಚಿಗೆ ಈಗ ಎರಡರಷ್ಟು ಜಾಸ್ತಿಯಾಗಿದೆಯೆಂದು ಹೇಳಬಹುದು. ಹಾಗಿದ್ದರೂ ಎರಡು ಮೂರು ಲಕ್ಷ ಹೆಚ್ಚಿಗೆ ಖರ್ಚಾಗಬಹುದು ಅಷ್ಟೆ. ವಾಸ್ತವವಾಗಿ ನೋಡಿದರೆ, ಜುಲ್ಮಾನೆ, ವ್ಯಾಲ್ಯುಯೇಷನ್ ಫೀಸ್ ಮುಂತಾದುವುಗಳಿಂದ ಒಟ್ಟು ವಿಶಾಲ ಮೈಸೂರಿನಿಂದ ವಸೂಲಾಗುವುದನ್ನು ಪರಿಗಣಿಸಿದರೆ ಇನ್ನೂ ಖರ್ಚು ಕಡಮೆಯಾಗುತ್ತದೆಂದೇ ಹೇಳಬೇಕು. ಏಕೆಂದರೆ ಹೈಕೋರ್ಟ್ ಈಗಲೂ ಇಂದೇ ಇದೆ. ಆದ್ದರಿಂದ ಈ ರೀತಿ ಮಾಡುವುದು

(ಶ್ರೀ ಕೆ ಕೆಂಚಪ್ಪ)

ನೂಕ್ತವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುವ ಮುನ್ನ ಒಂದು ವಿಚಾರವನ್ನು ಹೇಳಬಯಸುತ್ತೇನೆ.

ಇಲ್ಲಿ (4) ನೆಯ ಸೆಕ್ಷನ್‌ನಲ್ಲಿ 'Levy of fee in Courts and Public offices' ಎಂಬ ಭಾಗದಲ್ಲಿ ಹೀಗೆ ಹೇಳಿದೆ :

> " No document which is chargeable with fee under this Act, shall (i) be filed, exhibited or recorded in or be acted on or furnished by, any court including the High Court, (ii) be filed, exhibited or recorded in any public office or be acted on or furnished by any Public Officer"

ಇದು ನಮಗೆ ಖಂಡಿತವಾಗಿಯೂ ಆಶ್ಚರ್ಯವನ್ನುಂಟುಮಾಡುವುದಾಗಿದೆ. ಈ ಸಭೆಯಲ್ಲಿ ಅನೇಕ ಜನ ವಕೀಲರು ಇದ್ದಾರೆ. ಹಿಂದೆ ಯಾವ ರೀತಿ ಇತ್ತೆಂಬುದು ಅವರಿಗೆಲ್ಲ ಗೊತ್ತಿದೆ. ಈಗ ಯಾವುದಾದರೂ ಕಾಪಿ ತೆಗೆದುಕೊಂಡರೆ ಅದನ್ನು ಸ್ಟ್ಯಾಂಪ್ ಹಚ್ಚಿದ ಹೊರತು ಕೊಡಬೇಡಿ ಎಂದರೆ ಎಷ್ಟು ಕಷ್ಟವಾಗುತ್ತದೆ. ಯಾವುದಾದರೂ ಒಂದು ಕಾಪಿಯಲ್ಲಿ 350 ಪದಗಳಿದ್ದು ಪ್ರತಿಯೊಂದು ಪದಕ್ಕೂ 75 ನಯೇ ಪೈಸೆಯಂತೆ ಅತನು ಕೊಡಬೇಕೆಂದರೆ ಆ ಕಾಪಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಇದನ್ನೊಂದು ನಣ್ಣ ವಿಚಾರವೆಂದು ತಿಳಿದುಕೊಳ್ಳಬಾರದು. ಇಂಡಿಯನ್ ಎವಿಡೆನ್ಸ್ ಆಕ್ಟ್‌ನಲ್ಲಿ ಯಾವ ರೀತಿ ಇದೆಯೆಂದರೆ ಯಾವುದಾದರೂ ದಾಖಲೆಯನ್ನು accept ಮಾಡಿಕೊಳ್ಳಬೇಕಾಗಿ ಬಂದರೆ ಮಾತ್ರ ಸ್ಟ್ಯಾಂಪ್ ಹಚ್ಚಿ ತೆಗೆದುಕೊಳ್ಳಬೇಕೆಂದಿದೆ. ಇವೆಡಕ್ಕೂ ಸ್ಟ್ಯಾಂಪ್‌ಹಚ್ಚಿ ಕೊಡಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ಕೋರ್ಟಿನವರು ಅದನ್ನು ಪರಿಗಣಿಸುವುದಿಲ್ಲ. ಕೋರ್ಟಿನಲ್ಲಿ ಎಕ್ಸಿಬಿಟ್ ಮಾಡುವಾಗ ಅಥವಾ ಕೋರ್ಟಿನವರು ಪರಿಗಣಿಸುವಾಗ ಸ್ಟ್ಯಾಂಪ್ ಹಚ್ಚುವ ನಂಪ್ರದಾಯ ಇಂಡಿಯನ್ ಎವಿಡೆನ್ಸ್ ಆಕ್ಟ್‌ನಲ್ಲಿದೆ. ಈಗ ಸದ್ಯಕ್ಕೆ ಹೀಗೆ ಏಾದ ಮಾಡಬಹುದು; ಹಿಂದೆ ಇಂಥ ಸೆಕ್ಷನ್ ಇದ್ದರೂ ಸಹ ಏಕೆ ಸ್ಟ್ಯಾಂಪ್ ಕೊಡುತ್ತಿದ್ದಿಲ್ಲ? ಈಗಲಾದರೂ ಏಕೆ ಕೊಡುತ್ತಾರೆ? ಎಂದು ಇಲ್ಲದಿರುವ ಪ್ರಶ್ನೆ ಹಾಕಬಾರದು. ಈಗ ರೆವೆನ್ಯೂ ಅಧಿಕಾರಿಗಳು ಸ್ಟ್ಯಾಂಪುಕೇಳಿ ಕಾಪಿ ಕೊಡುತ್ತಾರೆ. ಸ್ಟ್ಯಾಂಪು ಕೊಡದೆ ಕೊಡುವುದಿಲ್ಲ. ಸಂದರ್ಭ ಬಂದಾಗ ಕಾಪಿ ಹಾಜರು ಮಾಡಬಹುದು ಅಥವಾ ಬಿಡಬಹುದು. ಸ್ಟ್ಯಾಂಪು ಹಚ್ಚಿ ಕೊಡಬೇಕೆಂದು ಹೇಳಿದರೆ ಸೆಕ್ಷನ್ ಹಾಗಿದ್ದರೂ ಇದುವರೆಗೂ ಏಕೆ ಸ್ಟ್ಯಾಂಪ್ ತೆಗೆದುಕೊಂಡಿಲ್ಲ ಎಂದು ನೋಡಬೇಕು. When the framers of the Act see that there have been apparently some mistakes or anomalies, it is their duty to rectify them. ಈ ದೃಷ್ಟಿಯಿಂದ ಹಿಂದಿನಿಂದಲೂ ಒಂದು ವಿಧಿ ಇರುವುದರಿಂದ ಈಗಾದರೂ ಅದನ್ನು filed ಎನ್ನುವುದು ಬೇಡ, acted ಎಂದು ಇಟ್ಟುಕೊಳ್ಳಿ, ಇಲ್ಲದಿದ್ದರೆ exhibited ಎಂದು ಇಟ್ಟುಕೊಳ್ಳಿ, " when the document is to be acted upon or in order to enable the court to act on it." ಇವೆರಡಕ್ಕೂ ಒರಿಜನಲ್ ಬಿಟ್ಟರೆ ಅರ್ಥವಿಲ್ಲ. ಆದ್ದರಿಂದ ಈ ದೃಷ್ಟಿಯಿಂದ ಇನ್ನು ಮುಂದೆ ಕಾಪಿ ತೆಗೆದುಕೊಳ್ಳುವಾಗ ತುಂಬ ವಿಚಾರ ಮಾಡಬೇಕು. ಇದು ನೂರಾರು ರೂಪಾಯಿಗಳ ಪ್ರಶ್ನೆಯಲ್ಲ, ಭಾರಿ ಪ್ರಶ್ನೆ. ಕಾಪಿ ತೆಗೆದುಕೊಳ್ಳದೇ ಯಿದ್ದರೆ ಅಗ್ಯುಮೆಂಟ್ ಮಾಡುವುದಕ್ಕೆ ಬರುವುದಿಲ್ಲ; ಕೋರ್ಟುಗಳಲ್ಲಿ ಹೇಳುವುದಕ್ಕೆಅಧಾರಬೇಕು. ನಾವು ಬರೆದುಕೊಂಡು ಬಂದು ಹೇಳುವುದು ಅಥೆಂಟಿ ಕೇಟೆಡ್ ಅಲ್ಲ, ನಂಪ್ರದಾಯವಲ್ಲ. ಕೋರ್ಟಿನವರಿಗೆ ಬರೆದುಕೊಂಡುಹೋಗಿ ಹೇಳುವುದು ಅಧಿಕಾರಿಯುತವಾದುದಲ್ಲ. ಈ ದೃಷ್ಟಿಯಿಂದ ಒಳ್ಳೆಯ ಅಭಿಪ್ರಾಯಗಳು ಕೆಲವನ್ನು ಪದೇ ಪದೇ ತಮ್ಮೆದುರಿಗೆ ನೀಡುತ್ತಿದ್ದೇನೆ. ಆದರೂ ಸಹಿತ ನನ್ನ ಅಭಿಪ್ರಾಯಕ್ಕೆ ಎಲ್ಲರಿಂದಲೂ ಮನ್ನಣೆ ಬಂಧಹಾಗೆ ಕಾಣುವುದಿಲ್ಲ. ಈಗಾದರೂ ದಯಮಾಡಿ ಇದನ್ನು ಸರಿಪಡಿಸಿ. ಕಣ್ಣಿಗೆ ಕಂಡ ಹಾಗೆ ಎಲ್ಲರಿಗೂ ಗೊತ್ತಿರುವ ಹಾಗೆ ಈ ತಪ್ಪಿದೆ. ಈ ತಪ್ಪನ್ನು ತಿದ್ದುವುದಕ್ಕಾಗದಿದ್ದರೆ ಏನು ತಾನೆ ತಿದ್ದುವುದಕ್ಕೆ ಸಾಧ್ಯ? ಹಿಂದೆ ಕಾನೂನು ಮಾಡುವಾಗ ತಪ್ಪುಮಾಡಿದರೆ ಮುಂದೆ ಅದನ್ನು ತಿದ್ದಿಕೊಳ್ಳಬಾರದೆ? ಇತರರ ಅಭಿಪ್ರಾಯವೇನಾದರೂ ಇರಬಹುದು. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ಇತರರು ತಮ್ಮ ಅಭಿಪ್ರಾಯವನ್ನು ಸೂಚಿಸಬಹುದು. ನನ್ನಅಭಿಪ್ರಾಯವನ್ನು ಹೇಳುವುದು ನನ್ನ ಕರ್ತವ್ಯ; ಹೇಳಿದಿದ್ದರೆ ಲೋಪವಾಗುತ್ತದೆ; ವಿರೋಧ ಪಕ್ಷದವರು ಎಚ್ಚರಿಕೆ ಕೊಡಬೇಕಾದದ್ದು ಅವರ ಕರ್ತವ್ಯ. ಅದರ ಮೇಲೂ ಸರಿಪಡಿಸದಿದ್ದರೆ ಏನುಮಾಡುವುದು? ಕರ್ತವ್ಯ ಪಾಲನೆ ಮಾಡುವುದು ನಮ್ಮ ಜವಾಬ್ದಾರಿ. ಈ ತಪ್ಪುಗಳೇನಿವೆ ಅವುಗಳನ್ನು ದಯಮಾಡಿ ಬದಲಾವಣೆಮಾಡಿ ಮೊದಲಿನ ಆಕ್ಟಿನಲ್ಲಿರುವ ಕಲಮುಗಳನ್ನೇ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Sri G. VENKATAI GOWDA.–Subject to the note of dissent given by me, I would welcome this Bill and the note of dissent was necessitated to avoid some of the controversies that may crop up after various provisions of this Bill are given effect to by way of an enactment. I would first refer to Section 24. It deals with "Suits for a declaratory decree or order, with or without consequential relief". When the market value of the property is less than Rs. 100, the minimum fee is required to be paid on Rs. 100 under Section 24. Section 29 deals with suits for possession not otherwise provided for. Under this section also, the minimum fee required to be paid is on Rs. 100 even when the market value of the property is less than Rs. 100. So under these two sections—Sections 24 and 29—the minimum fee, even when the market value of the property is less than Rs. 100, is fixed on Rs. 100. The maintaining of the same amount would lead to some other difficulties because Section 24 deals with suits for declaration and possession and Section

29 deals with suits for possession only. Even when a declaration is unnecessary, a party may come under Section 24 and ask for declaration which is unnecessary. So unnecessarily there might be an issue framed by the Court to go into a question, whether it is necessary or not; so we are giving additional work to the court and also making the parties ask for unnecessary prayers even when there is no necessity for a prayer for a declaration. Maintaining the same amount of fee under Sections 29 and 24 leads to some controversies as the parties may come and take shelter under Section 24. I hope the Hon'ble Minister for Legal Affairs would pay heed to my submission and substitute an amount, either raising the amount under Section 24 or reducing the amount under Section 29. Instead of enhancement, I think that Rs. 75 may be fixed under Section 29 to avoid controversies.

Coming to Section 27, the language of the section applies also to the suits for declaration and for consequential relief. This section does not contain the requirement as to the minimum valuation applicable to suits regarding private property. Court fee on Rs. 100 is to be paid according to section 29 and this will be an amount that is likely to be paid under Section 24 and that would have to be paid under Section 47 which would cover all suits the subject matter of which is incapable of valuation. So some sort of remedy has got to be found regarding Section 27 and there must not be a serious distinction between private property and trust property.

Coming to exemption under Section 69, I say it is not exhaustive. Applications before the Controller for supply of any commodity may also be included in the list of those exemptions and also applications for removal of timber from patta lands may be included.

Mr. CHAIRMAN.—Will the Hon'ble Member require more time?

Sri G. VENKATAI GOWDA.—Yes.

Mr. CHAIRMAN.—The House will now rise and re-assemble at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[SRI J. H. SHAMSUDDIN in the Chair]

Sri G. VENKATAI GOWDA.—I was dealing with clause 69. Under Clause 69 (*ii*) which reads as follows:—

> "Memorandum or appearance filed by advocates of pleaders when appearing for persons proceeded against in criminal cases;"

exemption from payment of fee is given to Advocates and Pleaders when appearing for persons who are criminally proceeded against. But I fail to understand why the same sort of exemption should not be given to Advocates and Pleaders who appear for complainants in private cases. Even in the case of memorandum of appearance filed by Advocates or Pleaders when appearing for complainants and petitioners the same benefit should be extended. There is no reason why there should be any distinction in this regard.

Sri B. VAIKUNTA BALIGA.—Complainants under duress.

Sri B. K. PUTTARAMIYA.—There is no quorum, sir.

Mr. CHAIRMAN (Sri J. H. Shamsuddin).—There is quorum.

Sri G. VENKATAI GOWDA.—Whether a complainant is under duress or not, the parties go to court for the purpose of getting some justice done.

Sri B. K. PUTTARAMIYA.—There are only 22 members. I think there should be 51 members for quorum.

Mr. CHAIRMAN.—Does the Hon'ble Member mean to say that it should be one-fourth?

Sri B. K. PUTTARAMIYA.—Yes.

Mr. CHAIRMAN.—I shall look into the relevant rule and let the Hon'ble Member know.

Sri B. K. PUTTARAMIYA.—At the time of your decision only the number of members that are present now should be taken into consideration.

Mr. CHAIRMAN.—Yes, at the time I actually found what was the number required for quorum—that is the relevant data I will take into consideration. Will the Member kindly quote the rule under which one-fourth is required?

Sri B. K. PUTTARAMIYA.—The convention in this House is. . . .

Mr. CHAIRMAN.—It is not a matter of convention. It is a matter regulated by the rules.

Sri G. VENKATAI GOWDA.—I should say that the distinction made in this case is not justifiable.

Mr. CHAIRMAN.—At the time when the Hon'ble Member asked the question, there was quorum in the House. The matter is regulated by article 189 of the Constitution and I will read the relevant clause:

> "189 (3) Until the Legislature of the State by law otherwise provides the quorum to constitute a meeting of a House of the Legislature of a State shall be ten members or one-tenth of the total number of members of the House, whichever is greater."

Therefore, 21 Members constitute the quorum in this House and at the time the member raised the matter there was a sufficient number of members present in the House to form the quorum. So, the House may proceed now.

Sri G. VENKATAI GOWDA.—As regards Article 11 (*i*).:

A distinction is sought to be made when an application is to be made under Order XXI Rule 58 of the Code of Civil Procedure which involves property worth more than Rs. 3,000. It is said that the court fee payable on this is Rs. 12·50 and Re. 1 or Rs. 2·50 in any other court. I submit that this distinction is not warranted because the procedure adopted irrespective of the value of the property is the same and also procedure adopted in respect of applications made under Section 47 is all summary procedure. The Hon'ble Minister for Law knows that even by means of affidavits these applications can be disposed of. So, the court fee of Rs. 12·50 mentioned has to be deleted so as to be in conformity with the procedure now being adopted.

Regarding section 39, which pertains to suits for setting aside attachment, the court fee prescribed is one-fourth of the market value of the attached property in respect of which the suit is instituted or on the amount for which the property was attached. I will put a hypothetical case. Supposing a property worth Rs. 4,000 is attached for an amount and the gentleman who wants to raise the attachment may still file a regular suit because the minimum fee is Rs. 100. Supposing that property is attached for Rs. 100 he can pay Rs. 7-8-0 instead of resorting to summary procedure. That will involve a lot of work.

Mr. CHAIRMAN.—In the section the word used is suit and not an application.

Sri G. VENKATAI GOWDA.—Under Order XXI, with reference to an application to raise the attachment, that is the procedure contemplated under the Civil Procedure Code. Whenever property is attached wrongfully, the person can file an application paying a nominal court-fee. In order to avoid that complication the rate of Rs. 12-8-0 has got to be deleted and the rate as mentioned in (*b*) maintained.

Coming to the next point, I would submit that for application or petition under Sections 34, 72, 73 and 74 of the Indian Trusts Act, 1882, a stamp fee of Rs. 12·50 has been imposed. This is high and no where this is prevailing. A reasonable amount of Rs. 5 may be fixed.

With these observations, I submit that necessary amendments may be made to relevent clauses of this Bill.

Sri V. SRINIVAS SHETTY (Coondapur).—Sir, the Hon'ble Minister for Law was pleased to compliment the Select Committee and thereby complimented himself. I was also a member of the Select Committee and the Government had to give in, it is true, on so many points rather unwillingly...

Sri B. VAIKUNTA BALIGA.—That of course.

Sri V. SRINIVAS SHETTY.—I would like to say that we got most of the things which we wanted. I would like to make a few general observations in respect of the Bill. The main principle underlying any Bill on the Court fees is that there should be no attempt to make money out of justice. Justice should not only be expeditious but cheap. These are the observations made by the Chief Justice of India and other Judges of the High Courts in India to the Finance Commission when it went round and enquired into the measures of taxation. Why I bring this before the Hon'ble House is to show how justice is administered in this State. I had an occasion to visit some of the courts in this State especially in the old Mysore State and I am sorry to say, and the Hon'ble Minister had agreed with me during the discussion, that the condition of the courts is deplorable.

Mr. CHAIRMAN.—Any agreement privately entered into between the Hon'ble Minister and the Hon'ble Member in the Select Committee may not be stated before the House.

Sri V. SRINIVAS SHETTY.—I am not speaking of the agreement in the Select Committee, Sir. I had an occasion to visit a few courts in this State. I visited a first-class criminal court in this State. I was astonished to see all the properties stacked in the Court Hall. There was very little room for the lawyers to sit in the court room. I am told that in many of the courts in the State, things are no better. We had a talk with the Hon'ble Chief Justice of the State recently. That was his opinion also. So, Sir, the State should not only collect the court fee or any other taxes by forming a law but also have in view the main purpose for which these taxes are collected, and especially it should be borne in mind that the court fees collected should go to improve the condition of courts and the administration of justice. One cannot say that justice can be properly administered in such courts where ordinarily judges would feel very much ashamed to sit—in some of the courts I would say that judges would not be quite willing to sit even. Sooner or later this state of affairs should be mended. Better facilities should be created both for the judges, the advocates and the public as well.

AN HON'BLE MEMBER.—Are we discussing the Court Fees Bill or conditions of courts ?

Sri V. SRINIVAS SHETTY.—I am referring to the point as to how this amount should be spent.

Sri B. VAIKUNTA BALIGA.—This issue is not before the House now.

Sri V. SRINIVAS SHETTY.—I wish to bring to the notice of the Government that the parlous state of affairs should be remedied. Even though we have had independence for ten years, separation of judiciary and the executive has not taken place. I find, Sir, that in many parts of the State, even now, there are police prosecutors. Of course in the erstwhile Madras State my District formed a part unwillingly. Even there, Government abolished police prosecutors and appointed additional public prosecutors from among the lawyers a considerable time ago. But I find, in this part of the State of Mysore, the system of police prosecutors continues. I do not know how with all the knowledge of the latest criminal law or administration of justice, this Government still sticks to the outmoded system of police prosecutors. I suggest that Government should not only bring in a Bill to tax, but, they must, as early as possible, bring in measures to remedy these things in the courts and the system of prosecution. I had an opportunity to refer to these things on several occasions. My Hon'ble friend the Minister for Courts is a very experienced lawyer, of course, this Bill will be piloted through and passed without any dissent. But I take this occasion to appeal to the Government to take the earliest opportunity to reorganize the entire system of judiciary and to use the revenues it collects to improve the Courts, the system of prosecution and the system of investigation for the betterment of the State.

One point which I should like to bring before this House is with regard to court fee. I find in article 1—I have given an amendment also with regard

(SRI V. SRINIVAS SHETTY)

to this—the fee specified for every ten rupees is 75 nP. If there be a suit for about a crore or two crores, what will be the court-fee payable on that? It runs into some astronomical figure. It is better, I am placing before the House my point of view, to put some ceiling on the court fees. We are always in the habit of putting some ceiling—a ceiling on land holding, ceilings on incomes, etc. We do not know whether it is a rich man or a poor man that goes to court. If he is a rich man, he may somehow manage it. Even then, if he is asked to pay one lakh or two lakhs towards court-fee, that also sounds rather strange. But he may borrow or do something. What about a poor man? He may not go to court at all. There is also a further question as to why it is only the rich men that should be enabled to go to court and not the poor man? We should also consider the other side of the medal. The poor people will be hit hard; and therefore I request the Hon'ble Minister for Law to consider this aspect of the case and accept my amendment which proposes a ceiling. I will move the amendment later at the proper stage.

Sri B. VAIKUNTA BALIGA.—Even from persons who are in a position to pay?

Sri V. SRINIVAS SHETTY.—That of course will have to be considered.

4 P.M.

ಶ್ರೀ ವೈ. ವೀರಪ್ಪ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯು ಪ್ರಥಮತಃ ಈ ಸಭೆಯಲ್ಲಿ ಚರ್ಚೆಗೆ ಬಂದು, ಆನಂತರ ಪರಿಶೀಲನಾ ಸಮಿತಿಗೆ ಹೋಗಿ, ಅಲ್ಲಿಂದ ಈಗ ಪುನಃ ಈ ಸಭೆಯ ಮುಂದೆ ಪರಿಶೀಲನೆಗೆ ಬಂದಿದೆ. ಆ ಪರಿಶೀಲನಾ ಸಮಿತಿಯಲ್ಲಿ ನಾನೂ ಸಹ ಒಬ್ಬ ಸದಸ್ಯನಾಗಿದ್ದೆನು. ಜನತೆಯ ಮೇಲೆ ಬಹಳ ದೊಡ್ಡ ಭಾರ ಹೊರಿಸುತ್ತಿದ್ದೀರೆಂಬ ಅಭಿಪ್ರಾಯವನ್ನು ಸಮಿತಿಯ ಮುಂದೆ ನಾನೂ ಕೂಡ ವ್ಯಕ್ತಪಡಿಸಿದ್ದೇನೆ. ಪರಿಶೀಲನಾ ಸಮಿತಿಯ ವರದಿಗೆ ನಾನೂ ಸಹ ನನ್ನ ಸಮ್ಮತಿಯನ್ನು ಕೊಟ್ಟಿದ್ದೇನೆ. ಮೂಲಭೂತವಾಗಿ ಈ ಮಸೂದೆಯಲ್ಲಿರತಕ್ಕ ತತ್ತ್ವವು ಪ್ರಸಕ್ತ ನನ್ನಿವೇಶದಲ್ಲಿ ಸೂಕ್ತವಾಗಿದೆಯೇ ಇಲ್ಲವೇ ಎಂಬುದನ್ನು ನಾವು ಈಗ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಈ ಮಸೂದೆಯನ್ನು ತರುವಾಗ ಇಂಥ ಕಾರಣ, ಇಂಥ ಉದ್ದೇಶಗಳ ಸಲುವಾಗಿ ಎಂದು ಹೇಳುವಾಗ ಕೆಲವು ಅಂಶಗಳನ್ನು ನಮೂದು ಮಾಡಲಾಗಿದೆ. ಅನೇಕಪ್ರದೇಶಗಳು ನಮ್ಮ ಪ್ರಾಂತದಲ್ಲಿ ವಿಲೀನವಾಗಿ ಈಗ ವಿಶಾಲ ಕರ್ನಾಟಕವಾಗಿರುವುದರಿಂದ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ರೀತಿಯ ಕಾನೂನು ಜಾರಿಯಲ್ಲಿ ಇರುವುದು ಮೂಲ ಗುರಿಯಾಗಿದೆ ಎಂದು ಹೇಳಲಾಗಿದೆ. ಆದರೆ ಈ ದಿವಸ ಈ ಗುರಿ ಎಷ್ಟುಮಟ್ಟಿಗೆ ಸಾಧಿಸಿದೆ, ಈ ಮಸೂದೆಯನ್ನು ಕಾನೂನಾಗಿ ಮಾಡುವದರಿಂದ ಎಷ್ಟುಮಟ್ಟಿಗೆ ಪರಿಣಾಮವಾಗಿದೆ ಎಂಬುದನ್ನು ನೋಡಿದರೆ ನಿಜವಾಗಿಯೂ ಜನತೆಯ ಮೇಲೆ ಹೊರೆಯ ಮೇಲೆ ಹೊರೆಯನ್ನು ಹೊರಿಸಿದಂತಾಗಿದೆ ಎಂದು ನಾನು ಹೇಳಬೇಕಾಗಿದೆ. ನಮ್ಮ ಹಿಂದಿನ ಸಂಸ್ಕೃತಿಯ ಆಧಾರದ ಮೇಲೆ ಮಾತನಾಡುವುದಾದರೆ ಉಪನಿಷತ್ತನ್ನು ಉಲ್ಲೇಖಿಸಿ ಅದರಲ್ಲಿರುವ ನನ್ಮ ಧ್ಯೇಯ ಘೋರಣೆಯನ್ನು ಪ್ರಸ್ತಾಪಿಸಿ ಅಲ್ಲಿರುವ ನಾಲ್ಕನೆಯ ಬ್ರಾಹ್ಮಣದಲ್ಲಿನ ವಾಕ್ಯವನ್ನು ಹೇಳಬೇಕೆನ್ನುತ್ತೇನೆ.

Sri B. VAIKUNTA BALIGA.—Sir, may I know whether the Hon'ble Member is attacking the Report to which he is a party or attacking the amendment proposed?

Sri Y. VEERAPPA.—Mr. Speaker, I have already begun by saying that even though I happened to be a member of the Select Committee and suggested some improvements here and there, fundamentally I am attacking the Bill.

Mr. CHAIRMAN.—This Bill has emerged out of the recommendations made by the Select Committee. The principles of the Bill cannot be discussed in detail at this stage. The Hon'ble Member will have to confine himself to the amendments and the recommendations of the Select Committee and will have to support or oppose it.

Sri Y. VEERAPPA.—I respectfully submit to the Chair that the Hon'ble Members of this House are entitled to speak on the Bill. It cannot be restricted like that.

Sri B. VAIKUNTA BALIGA.—Not the Members who have signed the report.

Mr. CHAIRMAN.—I am not restricting the Hon'ble Member in the debate. But this is not the stage at which the principles of the Bill may be challenged or discussed. That is done at the stage of the first reading of the Bill and that is over.

Sri Y. VEERAPPA.—As far as possible I adhere to the direction issued, Sir. But I must be pardoned if I make some observations touching the general principles also.

ಬಹುಶಃ ದುರದೃಷ್ಟವಶಾತ್ ನಾನೂ ಒಬ್ಬನು ಆ ಸೆಲೆಕ್ಟ್ ಕಮಿಟಿಯ ಸದಸ್ಯನಾಗಿದ್ದು ಸಮಿತಿಯ ವರದಿಗೆ ಅನಿವಾರ್ಯವಾಗಿ ಸಮ್ಮತಿಯನ್ನು ಕೊಟ್ಟಿದ್ದರೂ ಕೂಡ ಇವೊತ್ತಿನ ದಿವಸ ನನ್ನ ಮಾನ್ಯ ಮಿತ್ರರು ತಂದಿರತಕ್ಕಂಥ ಕೆಲವು ತಿದ್ದುಪಡಿಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಒಬ್ಬ ಸದಸ್ಯರು.—ಸಮ್ಮತಿ ಕೊಡುವುದಕ್ಕೆ ಅಂಥ ಅನಿವಾರ್ಯ ಪರಿಸ್ಥಿತಿ ಏನು ಬಂದಿತ್ತು ?

ಶ್ರೀ ಪೈ. ವೀರಪ್ಪ.—ನಮ್ಮ ಪಕ್ಷದ ನಾಯಕರು ಏನು ಮಾತನಾಡಿದ್ದಾರೋ ಆ ಒಂದು ಅಂಶವನ್ನು ಪುಷ್ಟೀಕರಿಸಿ ಈಗ ನಾನು ಮಾತನಾಡುತ್ತಿದ್ದೇನೆ. ಈ ಮಸೂದೆಯ ಕರಡನ್ನು ತಯಾರುಮಾಡುವಾಗ ಕೋರ್ಟ್ ಫೀಜ್ ಮತ್ತು ಸೂಟ್ಸ್ ವ್ಯಾಲ್ಯುಯೇಷನ್ ಆಕ್ಟನ್ನು ಯಾವ ರೀತಿಯಾಗಿ ಮನಸ್ಸಿನಲ್ಲಿಟ್ಟುಕೊಂಡು ಪರಿಶೀಲನೆ ಮಾಡಿದ್ದಾರೆಂಬುದನ್ನು ನೋಡಬೇಕು. ಈ ಕಾನೂನು 1870ರಲ್ಲಿ ಮೊದಲಿಗೆ ಜಾರಿಗೆ ಬಂದಾಗ ಬ್ರಿಟಿಷ್ ಇಂಡಿಯಾದಲ್ಲಿ ಒಂದು ರೀತಿಯ ಪದ್ಧತಿ ಇತ್ತು. ಆದರೆ ಇವೊತ್ತಿನ ದಿವಸ ತಂದಿರತಕ್ಕಂಥ ಮಸೂದೆಯ ರೀತಿಯನ್ನು ನೋಡಿದರೆ ಮೂಲ ತತ್ತ್ವದಿಂದ ಆದಷ್ಟು ದೂರ ಸರಿದಿದ್ದಾರೆ ಎಂದು ಹೇಳಬಹುದು. ಏಕೆಂದರೆ ಈ ವಿಚಾರದಲ್ಲಿ ನಮ್ಮ ಭಾರತದ ಸುಪ್ರೀಮ್ ಕೋರ್ಟ್ ನವರು ಅನೇಕಸಲ ತಮ್ಮ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಟ್ಯಾಕ್ಸ್ ಮತ್ತು ಕೋರ್ಟ್ ಫೀಜ್ ಎಂಬುದರಲ್ಲಿ ವ್ಯತ್ಯಾಸವಿದೆ ಎಂದು ಹೇಳಿದ್ದಾರೆ.

Tax is levied on the pleasure and free will of the legislatures, whereas court fee is considered in accordance with services rendered.

ಈ ಕಾನೂನಿನ ಮೂಲ ತತ್ತ್ವವನ್ನು ಅನುಸರಿಸಿ ಈ ಮಸೂದೆಯನ್ನು ತಂದಿದ್ದಾರೆಯೇ ಎಂದರೆ ಖಂಡಿತವಾಗಿ ಇಲ್ಲವೆಂದು ಹೇಳಬೇಕಾಗಿದೆ. ನ್ಯಾಯವನ್ನು ಪಡೆಯುವುದಕ್ಕೆ ಕೋರ್ಟಿಗೆ ಕೊಡಬೇಕಾಗಿರುವ ಫೀಜ್ ಕೊಡುವ ಶಕ್ತಿ ಬಡವರಿಗೆ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕಾದದ್ದು ಮುಖ್ಯವಾದುದು. ಈ ಅಂಶವನ್ನು ಹೇಳುವಾಗ ಇವರು ಕಾಂಗ್ರೆಸ್ ಪಕ್ಷದ ಸದಸ್ಯರು ಅಥವಾ ವಿರೋಧ ಪಕ್ಷದ ಸದಸ್ಯರು ಹೇಳುತ್ತಿದ್ದಾರೆಂಬುದನ್ನು ಗಮನಿಸಬಾರದು. ಜನಸಾಮಾನ್ಯರಿಗೆ ಸಂಬಂಧಪಟ್ಟದ್ದನ್ನು ಪ್ರಸ್ತಾಪಮಾಡಿ ನಾನು ಹೇಳುತ್ತಿದ್ದೇನೆ. ಇವೊತ್ತಿನ ದಿವಸ ನ್ಯಾಯ ದೊರಕುವುದು ಯಾವ ರೀತಿ ದೂರವಾಗುತ್ತಿದೆ ಎಂಬುದನ್ನು ಹೇಳುತ್ತೇನೆ. ಖಂಡಿತವಾಗಿ ಯಾವುದೇ ಮನುಷ್ಯನಿಗೆ ಅನ್ಯಾಯವಾಗಿದ್ದರೆ ಅವನು ಸಾಮಾನ್ಯ ಬಡ ಮನುಷ್ಯನಾಗಿರುತ್ತಾನೆ. ದುಡ್ಡು ಇದ್ದವರು ಕೋರ್ಟಿಗೆ ಹೋಗುವುದು ಬೇಡ, ಕೋರ್ಟ್ ಬಾಗಿಲು ಹತ್ತುವುದು ಬೇಡ ಎಂದು ದುಡ್ಡಿನ ಬಲದಿಂದ ತಮ್ಮೊಳಗೆ ಒಂದು ತೀರ್ಮಾನಮಾಡಿಕೊಳ್ಳುತ್ತಾರೆ. ಕೇವಲ ಒಂದು ಸಣ್ಣ ಕೇನು ಕೋರ್ಟಿನಲ್ಲಿ ದಾಖಲು ಆಗಬೇಕಾದರೆ ಕಷ್ಟ; ಶೀಘ್ರವಾಗಿ ನ್ಯಾಯ ದೊರಕುವುದಿಲ್ಲ. ಇದನ್ನು ಅಂಕಿ ಅಂಶಗಳಿಂದ ಸಿದ್ಧಪಡಿಸಬಹುದು. ಸರಕಾರದವರು ಇದನ್ನು ಖಂಡಿತವಾಗಿ ಆಲೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಜನ ಸಾಮಾನ್ಯರಿಗೆ ಸರಿಯಾದ ರೀತಿಯಲ್ಲಿ ನ್ಯಾಯ ದೊರೆಯುತ್ತಿದೆಯೇ ಎಂಬುದಕ್ಕೆ ಸಮಂಜಸ ಉತ್ತರ ಬಂದಿಲ್ಲ. ಇಂಥ ಸಂದರ್ಭದಲ್ಲಿ ಈ ಕೋರ್ಟ್ ಫೀಜ್ ಭಾರವನ್ನು ಜನ ಸಾಮಾನ್ಯರ ಮೇಲೆ ಹಾಕುತ್ತಿದ್ದಾರೆ. ಈಗಿರುವ ನ್ಯಾಯಾಂಗ ಆಡಳಿತದ ವ್ಯವಸ್ಥೆಯನ್ನೇ ಬದಲಾವಣೆಮಾಡಬೇಕಾಗಿದೆ. ಸಣ್ಣ ಪುಟ್ಟ ನ್ಯಾಯಗಳನ್ನು ಕೋರ್ಟಿಗೆ ತೆಗೆದುಕೊಂಡು ಹೋಗದೆ ಹಳ್ಳಿಗಳಲ್ಲಿಯೇ ಗ್ರಾಮ ಪಂಚಾಯಿತಿಗಳಲ್ಲಿ ತೀರ್ಮಾನವಾಗುವಂತೆ ಮಾಡಬೇಕು. ಹಳ್ಳಿಗಳಲ್ಲಿಯೇ ಇದ್ದು ಅನುಭವವುಳ್ಳ ವ್ಯಕ್ತಿಗಳನ್ನು ಗ್ರಾಮ ಪಂಚಾಯಿತಿಯಲ್ಲಿ ನೇಮಿಸಿ ಇಂಥ ಸಣ್ಣ ಪುಟ್ಟ ನ್ಯಾಯಗಳು ಕೋರ್ಟಿಗೆ ಹೋಗದಂತೆ ಮಾಡಿ ಹಳ್ಳಿಗಳಲ್ಲಿಯೇ ತೀರ್ಮಾನವಾಗುವಂತೆ ಅನುಕೂಲ ಮಾಡಿಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇವೊತ್ತಿನ ದಿವಸ ಎಷ್ಟು ಜಾಗ್ರತೆ ವಿಲೇಜ್ ಪಂಚಾಯ್ತಿ ಕೋರ್ಟನ್ನು ಮಾಡುತ್ತಿರೋ ಅಷ್ಟೇ ಜಾಗ್ರತೆ ಜನತೆಗೆ ಶೀಘ್ರದಲ್ಲಿ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಅನುಕೂಲವಾಗುವುದಲ್ಲದೆ, ರೈತರು ವರ್ಷಗಟ್ಟಲೆ ತಮ್ಮ ಕೆಲಸವನ್ನೆಲ್ಲಾ ಬಿಟ್ಟು ಸಾಕ್ಷಿ ಪಟ್ಟಿ ತಯಾರುಮಾಡುವುದರಲ್ಲೇ ಕಾಲವನ್ನು ವ್ಯರ್ಥಮಾಡಿ ಫೀಸು ತೆತ್ತು ವ್ಯಥಾ ಕೋರ್ಟಿನ ಬಾಗಿಲಿಗೆ ತಿರುಗುವುದನ್ನು ತಪ್ಪಿಸುತ್ತೀರಿ. ಸರ್ಕಾರದವರು ಈ ವಿಷಯವನ್ನು ಬಹುಮುಖ್ಯವೆಂದು ಪರಿಗಣಿಸಿ ಸಣ್ಣ ಪುಟ್ಟ ಕೇಸುಗಳೆಲ್ಲವೂ ಪಂಚಾಯ್ತಿ ಕೋರ್ಟುಗಳಲ್ಲೇ ತೀರ್ಮಾನವಾಗುವಂತೆ ಮಾಡುವುದರಿಂದ ಅವರ ಮೇಲೆ ಬಿದ್ದಿರುವ ಈ ಅಪಾರ ಹೊರೆಯೂ ಕಡಮೆಯಾದುದಲ್ಲದೆ ಜನತೆಗೂ ಸುಲಭವಾಗಿ ನ್ಯಾಯ ದೊರಕುತ್ತದೆ. ಅದಿಲ್ಲದಿದ್ದರೆ ಹಳ್ಳಿಯವರ ಕಷ್ಟ ಹೇಳತೀರದಂತಾಗುವುದು. ಈಗಂತೂ ನೀವು ಮೂರು ಮೂರು ತಾಲ್ಲೂಕಿಗೆ ಒಂದೊಂದು ಕೋರ್ಟ್ ಮಾಡಿರುತ್ತೀರಿ. ರೈತ ಹಳ್ಳಿಯಿಂದ ಬರಬೇಕು; ದಿನಗಟ್ಟಲೆ ತಂಗಳು ಅನ್ನ, ಒಣ ಕಲು ರೊಟ್ಟಿ ತಿಂದುಕೊಂಡು ಕೋರ್ಟು ಬಾಗಿಲು ಕಾಯುತ್ತ ಬಿದ್ದಿರಬೇಕು. ಈ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಸೂಚನೆ ಕೊಡುವುದು ಇಷ್ಟೆ: ನ್ಯಾಯವೇ ನಿಮ್ಮ ಧ್ಯೇಯ. Uniformity of law ದೇಶದಲ್ಲಿ ತರಬೇಕೆಂಬುದು ನಿಮ್ಮ ಗುರಿ. ಅಂದಮೇಲೆ ಈಗ ವಿಲೇನವಾಗಿರತಕ್ಕ ಪ್ರತಿಯೊಂದು ಭಾಗದಲ್ಲಿಯೂ ಇರತಕ್ಕ ನಾನಾ ರೀತಿಯಾದ ಕೋರ್ಟು ಫೀಸ್, ವ್ಯಾಲ್ಯುಯೇಷನ್ ಫೀ ಮುಂತಾದವುಗಳನ್ನು ಏಕರೂಪವಾಗಿ ಮಾಡಬೇಕೆಂಬುದು ನ್ಯಾಯ. ಇದಕ್ಕಿಂತ ಮುಖ್ಯವಾದದ್ದು ಆದಷ್ಟು ಶೀಘ್ರವಾಗಿ ನ್ಯಾಯವನ್ನು ದೊರಕಿಸಿಕೊಡುವುದು. ಈ ದೃಷ್ಟಿಯಿಂದ ಈ ಸಮಿತಿಯ ಸದಸ್ಯನಾಗಿ ನಾನಿದಕ್ಕೆ ಸಮ್ಮತಿ ಕೊಟ್ಟಿದ್ದರೂ, ನಮ್ಮ ಈ ಧ್ಯೇಯ ಸಾಧನೆಯ ದೃಷ್ಟಿಯಿಂದ ಹಳ್ಳಿಯಲ್ಲಿ ಪಂಚಾಯಿತಿ ಕೋರ್ಟುಗಳನ್ನು ಮೊದಲು ಸ್ಥಾಪನೆಮಾಡುವ ಪ್ರಯತ್ನ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಇದು ನನ್ನೊಬ್ಬನ ವಾದವಲ್ಲ. ಮಹಾತ್ಮಾ ಗಾಂಧಿಯವರು ಸಾರುತ್ತಿದ್ದುದೇ ಇದು. ಬೇಕಾದರೆ ಈ ಬಗ್ಗೆ ಒಂದು ಪರಿಶೀಲನಾ ಸಮಿತಿಯನ್ನು ಮಾಡಿ ಅದರ ರಿಪೋರ್ಟ್ ತರಿಸಿಕೊಳ್ಳಿ ಎಂದು ಸೂಚಿಸುತ್ತೇನೆ.

ಎರಡನೆಯದಾಗಿ ಈಗಿರುವ ರೀತಿಯಲ್ಲಿರುವ ಇನ್ನೊಂದ ನ್ಯೂನತೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಬ್ಬ ಮನುಷ್ಯ 3,000 ರೂಪಾಯಿಗಳ ಒಂದು ಪ್ರಾಮಿಸರಿ ನೋಟಿನ ಮೇಲೆ ಕೋರ್ಟಿನಲ್ಲಿ ದಾವೆ ಹಾಕಬೇಕಾದರೆ Pecuniary jurisdiction ಪ್ರಕಾರ 11¼ ರೂಪಾಯಿ ಫೀನು ಕೊಟ್ಟು ಮುನ್ಸೀಫ್ ಕೋರ್ಟಿಗೆ ಹಾಕುತ್ತಾನೆ. ಆದೇರೀತಿ ಎರಡು ಎಕರೆ ಮೂರು ಎಕರೆ ತರೀ ಅಥವಾ ಬಾಗಾಯಿತು ಜಮೀನುಳ್ಳ ಒಬ್ಬ ರೈತ ತನ್ನ ಜಮೀನಿನ ಬಗ್ಗೆ ಯಾವುದಾದರೂ ವಿವಾದ ಬೆಳೆದು ಅದನ್ನು ನಿವಾರಣೆಮಾಡಿಕೊಳ್ಳಬೇಕೆಂದರೆ ಕಂದಾಯದ ಹತ್ತರಷ್ಟರ ಮೇಲೆ ರೆಕ್ಕ ಹಾಕಿ—ಎಂದರೆ ಕಂದಾಯ ಐದು ರೂಪಾಯಿ ಆಗಿದ್ದರೆ

(ಶ್ರೀ ವೈ. ವೀರಪ್ಪ)

5×10=50 ರೂಪಾಯಿಗಳ ಮೇಲೆ ಇವನು 11¼ ರೂಪಾಯಿ ಫೀಸ್ ಕೊಟ್ಟು ದಾವೆ ದಾಖಲು ಮಾಡ ಬೇಕಾಗಿದೆ. ಪ್ರೋನೋಟ್ ಮೇಲೆ ದಾವಾಹಾಕಿ ಡಿಕ್ರಿ ಆದರೆ, ಅದರ ಮೇಲೆ ಅಪೀಲ್ ಮಾಡಬೇಕೆಂದರೆ ಸೆಕ್ಷನ್ 100ರ ಪ್ರಕಾರ ಅಲ್ಲಿ ಏನಿದ್ದರೂ question of law ಮೇಲೆ ಮಾತ್ರ ತೀರ್ಮಾನ ಮಾಡಲಾಗುತ್ತದೆ. ಇದನ್ನೇಕೆ ಹೇಳುತ್ತೇನೆಂದರೆ, 3,000 ರೂಪಾಯಿಗಳ ಒಂದು ಸಾದಾ ದಾವೆಗೂ ಮುನಿಸೀಫ್ ಕೋರ್ಟಿಗೆ ಮುಂಚೆ ಹೋಗಿ ಅಲ್ಲಿಂದ ಅಫೀಲ್ ಹೋಗಿ question of law ಮೇಲೆ ತೀರ್ಮಾನ ಪಡೆಯುತ್ತೇವೆ. ಅದೇ ಮೂರು ಎಕರೆಯ ಒಂದು ಜಮೀನಿನ ವಿಷಯದಲ್ಲಾದರೆ, ಅದು 15,000 ರೂಪಾಯಿ ಬಾಳುತ್ತದೆ ಅದನ್ನೂ ಮುನಿಸೀಫ್ ಕೋರ್ಟಿಗೆ ತೆಗೆದುಕೊಂಡು ಹೋಗೆಂದು ಹೇಳಿದ್ದಾರೆ. ಅಫೀಲ್ ಹೋದರೂ ಅವರು question of factನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಅಲ್ಲಿಗೆ ಫಾಕ್ಟ್ ವಿಷಯದಲ್ಲಿ 3000 ರೂಪಾಯಿನ ಪ್ರೋನೋಟಿಗೂ ಮುನಿಸೀಪ್ ಕೋರ್ಟಿನದೇ ಆಖೈರ್ ತೀರ್ಮಾನ, 15,000 ರೂಪಾಯಿ ಬೆಲೆ ಬಾಳುವ ಮೂರು ಎಕರೆ ತರೀ ಜಮೀನಿಗೂ ಅದೇ ಮುನಿಸೀಫ್ ಕೋರ್ಟಿನ ತೀರ್ಮಾನವೇ ಆಖೈರು ತೀರ್ಮಾನ. ಇದರಿಂದಾಗಿ ಜನತೆಗೆ ಯಾವ ರೀತಿಯ ಅನ್ಯಾಯ ಮತ್ತು ತೊಡಕುಗಳು ಉಂಟಾಗುವುವು ಎಂಬುದನ್ನು ಹೇಳಬೇಕಾದ್ದಿಲ್ಲ. ಈ ರೀತಿಯಾಗಿ, ಐದು ಎಕರೆ ಜಮೀನಿಟ್ಟುಕೊಂಡು 15,000 ಬೆಲೆಯುರುವ ಜಮೀನಿನ ವಿಷಯದಲ್ಲಿ ಅನುಭವಪಡೆದಿರುವ ನ್ಯಾಯಾಧೀಶರಿಂದ ತೀರ್ಮಾನ ಪಡೆಯುವುದಕ್ಕೆ ಅವಕಾಶ ಕಲ್ಪಿಸದಿದ್ದರೂ ಶೀಘ್ರವಾಗಿ ನ್ಯಾಯ ದೊರಕಿಸುವುದಕ್ಕೆ ಅವಕಾಶ ಕಲ್ಪಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಆದರೆ ವಾಸ್ತವವಾಗಿ ಈ ತತ್ವ ಇಂದು ಕಾರ್ಯತಃ ಈಡೇರಿಲ್ಲ. ಈ ದೃಷ್ಟಿಯಿಂದ, ಏಕರೂಪತೆಯ ದೃಷ್ಟಿಯಿಂದ ಈ ಬಿಲ್ಲನ್ನು ನಾವು ಆಖೈರಾಗಿ ಒಪ್ಪಿದ್ದರೂ, ಹಿಂದೂ ಸಂಸ್ಕೃತಿಯ ಮೂಲ ಸಿದ್ಧಾಂತಗಳಿಗೇ ಇದು ವಿರೋಧವಾಗಿದೆಯೆಂದು ನಾವಿದನ್ನು ಖಂಡಿಸಬೇಕಾಗಿದೆ. 'The weak must be protected from the strong" ಎಂಬ ಹಿಂದೂ ಸಿದ್ಧಾಂತಕ್ಕೆ ಇದು ವ್ಯತಿರಿಕ್ತವಾಗಿದೆ. ಖುರಾನಿನಲ್ಲಿ ಹಾಗೂ ಬೈಬಲಿನಲ್ಲಿ ಅಡಕವಾಗಿರತಕ್ಕ ಮೂಲ ತತ್ತ್ವವೂ ಕೂಡ "The meek shall inherit the right" ಎಂಬುದಾಗಿದೆ.

Mr. CHAIRMAN.—This may be a fine discourse on so many things. I have already said that the debate is restricted under Rule 69 which says :

> "The debate on a motion that the Bill as reported by the Select Committee be taken into consideration shall be confined to consideration of the report of the Select Committee and the matters referred to in that report or any alternative suggestions consistent with the principles of the Bill."

